ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,
ಉಡುಪಿ ಜಿಲ್ಲೆ , ಉಡುಪಿ.

**ಸೆಷನ್ಸ್ ಕೇಸ್ ನಂಃ 28/2024** **ಪಿಡಬ್ಲ್ಯು-7**

**ಸಿಡಬ್ಲ್ಯು-15**

| | | |
|---|---|---|
| ಸಾಕ್ಷಿದಾರರ ಹೆಸರು | - | ಶೇಖ್ ನಜೀರ್ ಅಹಮ್ಮದ್ |
| ತಂದೆಯ ಹೆಸರು | - | ಅಬೂಬಕ್ಕರ್ |
| ವಯಸ್ಸು | - | 52 ವರ್ಷ |
| ಉದ್ಯೋಗ | - | ಚಾಲಕ |
| ವಿಳಾಸ | - | ಕಾಪು, ಕೊಂಬಗುಡ್ಡೆ. |

ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ

ಮೃತ ಜ್ಯೋತಿ ಈಕೆಯ ಪರಿಚಯ ಇದೆ. ಆಕೆ ಕಾಪು ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಠಾಣೆಯ ಪಕ್ಕದಲ್ಲಿರುವ ವಸತಿಗೃಹದಲ್ಲಿ ಆಕೆ ವಾಸ ಮಾಡಿಕೊಂಡಿದ್ದಳು. ಅವಳು ಆತ್ಮಹತ್ಯೆ ಮಾಡಿಕೊಂಡಿದ್ದು, ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷಿಯಾಗಿ ಸಹಕರಿಸುವಂತೆ ನನಗೆ ಮತ್ತು ಚಾಸಾ16 ಇವರಿಗೆ ಪೋಲಿಸ್ ನೋಟೀಸ್ ನೀಡಿರುತ್ತಾರೆ. ಸದ್ರಿ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-11 ಎಂದು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಅದರಂತೆ ದಿನಾಂಕ 06-04-2024 ರಂದು ವೈದ್ಯಾಧಿಕಾರಿಗಳು ಮರಣೋತ್ತರ ಶವ ಪರೀಕ್ಷೆಯ ಸಮಯದಲ್ಲಿ ಮೃತ ಜ್ಯೋತಿ ಈಕೆಯ ಮೃತ ದೇಹದಿಂದ ಸಂಗ್ರಹಿಸಿದ ವಿಸೇರಾವನ್ನು ಠಾಣಾ ಸಿಬ್ಬಂದಿಗೆ ನೀಡಿದ್ದು, ಅದನ್ನು ಠಾಣಾ ಸಿಬ್ಬಂದಿ ತನಿಖಾಧಿಕಾರಿಯ ಸಮಕ್ಷಮ ಹಾಜರುಪಡಿಸಿದ್ದು, ಅವುಗಳನ್ನು ಪೋಲಿಸರು ಮುಂದಿನ ಕ್ರಮದ ಬಗ್ಗೆ ಅಮಾನತ್ತುಪಡಿಸಿಕೊಂಡು ಮಹಜರು ತಯಾರಿಸಿರುತ್ತಾರೆ. ಸದ್ರಿ ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-12 ಎಂದು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

2. ದಿನಾಂಕ 08-04-2024 ರಂದು ಪೋಲಿಸರು ಇನ್ನೊಂದು ನೋಟೀಸನ್ನು ನೀಡಿದ್ದು ಅದರಂತೆ ನಾನು ಕಾಪು ಪೋಲಿಸ್ ಠಾಣೆಯಲ್ಲಿ ಹಾಜರಾಗಿರುತ್ತೇನೆ. ಸದ್ರಿ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಅದೇ ದಿನ ಕಾಪು ಠಾಣಾ ಸಿಬ್ಬಂದಿ ಒಬ್ಬರು ಮೃತ ಜ್ಯೋತಿ ಈ ಹಿಂದೆ ಆಕೆಯ ಹಸ್ತಾಕ್ಷರದಲ್ಲಿ ಬರೆದಿಟ್ಟ ನೋಟ್ ಪುಸ್ತಕವನ್ನು ತನಿಖೆಯ ಸಲುವಾಗಿ ಹಾಜರುಪಡಿಸಿದ್ದು ಸದ್ರಿ ನೋಟ್ ಪುಸ್ತಕವನ್ನು ನಮ್ಮ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡು ಮಹಜರು ತಯಾರಿಸಿರುತ್ತಾರೆ. ಸದ್ರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸದ್ರಿ ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಸದ್ರಿ ನೋಟ್ ಪುಸ್ತಕವನ್ನು ನೋಡಿದಲ್ಲಿ ಗುರುತಿಸುತ್ತೇನೆ. ಅದನ್ನು ನಿಪಿ-15 ಎಂದು ಗುರುತಿಸಲಾಯಿತು. ಎರಡೂ ಪಂಚನಾಮೆಯ ಸಮಯದಲ್ಲಿ ಚಾಸಾ16 ನನ್ನ ಜೊತೆ ಇದ್ದು ಪಂಚನಾಮೆಗೆ ಸಹಕರಿಸಿರುತ್ತಾರೆ.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಆರ್.ಎ. ರವರಿಂದ</u>

ಪೋಲಿಸರು ನನ್ನ ಸಮಕ್ಷಮ ಯಾವುದೇ ನೋಟ್ ಪುಸ್ತಕವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪೋಲಿಸರು ತಯಾರಿಸಿದ ಮಹಜರುಗಳಿಗೆ ನಾನು ಸಹಿ ಮಾಡಿದ್ದೇನೆ ಮತ್ತು ನನಗೆ ಯಾವುದೇ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.